KAMD610016972021

# ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ, ಪಾಂಡವಪುರ

ಪ್ರಸ್ತುತ: **ಶ್ರೀ. ಪಾರ್ವತಮ್ಮ.ಬಿ,**
ಬಿ.ಎ., ಎಲ್.ಎಲ್.ಎಂ.
**ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ, ಪಾಂಡವಪುರ**

## ಅಸಲು ದಾವಾ ಸಂಖ್ಯೆ: 204/2021

ದಿನಾಂಕ 8 ನೇ ಫೆಬ್ರವರಿ - 2024

**ವಾದಿಗಳು** : 1. ಮಹದೇವಮ್ಮ ಕೋಂ: ಲೇಃ ನಂಜಪ್ಪ,
ಸುಮಾರು 56 ವರ್ಷ,

2. ನಾಗಮ್ಮ ಕೋಂ: ಲೇಃ ನಂಜಪ್ಪ,
ಸುಮಾರು 54 ವರ್ಷ,

ಇಬ್ಬರೂ ವಾಸಃ ಅಂಚನಹಳ್ಳಿ ಗ್ರಾಮ,
ಶೀಳನೆರೆ ಹೋಬಳಿ, ಕೃಷ್ಣರಾಜಪೇಟೆ ತಾಃ
ಮಂಡ್ಯ ಜಿಲ್ಲೆ.

**(ವಾದಿಯರ ಪರ ಶ್ರೀ.ಸಿ.ಎನ್., ವಕೀಲರು)**

**ವಿರುದ್ಧ**

**ಪ್ರತಿವಾದಿಗಳು** : 1. ಮಹದೇವಪ್ಪ ಬಿನ್ ಲೇಃ ಮರಿಲಿಂಗಯ್ಯ,
ಸುಮಾರು 52 ವರ್ಷ,

2. ಬಸವಣ್ಣ ಬಿನ್ ಲೇಃ ಮರಿಲಿಂಗಯ್ಯ,
ಸುಮಾರು 50 ವರ್ಷ,

3. ಶಂಭುಲಿಂಗಪ್ಪ ಬಿನ್ ಲೇಃ ಮರಿಲಿಂಗಯ್ಯ,
   ಸುಮಾರು 48 ವರ್ಷ,

   1 ರಿಂದ 3 ನೇ ಪ್ರತಿವಾದಿಗಳ ವಾಸಃ
   ಚಾಗಶೆಟ್ಟಿಹಳ್ಳಿ ಗ್ರಾಮ,
   ಕಸಬಾ ಹೋಬಳಿ, ಪಾಂಡಪುರ ತಾಃ
   ಮಂಡ್ಯ ಜಿಲ್ಲೆ.

4. ಮೀನಾಕ್ಷಿ ಕೋಂಃ ಪುಟ್ಟಣ್ಣಯ್ಯ,
   ಸುಮಾರು 45 ವರ್ಷ ವಯಸ್ಸು,
   ವಾಸಃ ಲಾಳನಹಳ್ಳಿ ಗ್ರಾಮ, ಕಸಬಾ ಹೋಬಳಿ,
   ಕೃಷ್ಣರಾಜನಗರ ತಾಃ ಮೈಸೂರು ಜಿಲ್ಲೆ.

**(ಪ್ರತಿವಾದಿ-2 ರವರ ಪರ ಶ್ರೀ.ಕೆ.ಹೆಚ್.ಆರ್, ವಕೀಲರು)**
**(ಪ್ರತಿವಾದಿ-1, 3 ಹಾಗೂ 4 ರವರು ಏಕಪಕ್ಷಿಯಾಗಿ ಉಳಿದಿರುತ್ತಾರೆ)**

| | | |
|---|---|---|
| ದಾವೆ ಸಲ್ಲಿಸಿದ ದಿನಾಂಕ | : | 24-08-2021 |
| ದಾವೆಯ ಸ್ವರೂಪ | : | ವಿಭಾಗ ಮತ್ತು ಪ್ರತ್ಯೇಕ ಸ್ವಾಧೀನತೆ |
| ದಾವೆಯಲ್ಲಿ ವಿಚಾರಣೆ ಪ್ರಾರಂಭವಾದ ದಿನಾಂಕ | | 19-04-2023 |
| ದಾವೆ ಇತ್ಯರ್ಥವಾದ ದಿನಾಂಕ | : | 08-02-2024 |
| ಒಟ್ಟು ಅವಧಿ | : | ವರ್ಷ 02, ತಿಂಗಳು 05, ದಿನ 15 |

**(ಪಾರ್ವತಮ್ಮ.ಬಿ.)**
**ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ,**
**ಪಾಂಡವಪುರ.**

# ತೀರ್ಪು

ವಾದಿಯು ಪ್ರಸ್ತುತ ದಾವೆಯನ್ನು, ಪ್ರತಿವಾದಿಗಳ ವಿರುದ್ಧ ದಾವಾ ಷೆಡ್ಯೂಲ್ ಆಸ್ತಿಗಳನ್ನು ಆರು ಸಮಭಾಗಗಳಾಗಿ ವಿಂಗಡಿಸಿ, ವಾದಿಯರಿಗೆ 2/6, ಆರನೇ ಎರಡು ಭಾಗದ ಹಿಸ್ಸೆಯನ್ನು ವಾದಿಯರಿಗೆ ಉತ್ತಮ ಮದ್ಯಮ ಎಂದು ವಿಭಾಗ ಮಾಡಿ ಕಾನೂನುಬದ್ಧ ಹಿಸ್ಸೆಯನ್ನು ಹಾಗೂ ದಾವೆಯನ್ನು ಹಾಜರುಪಡಿಸಿದ ದಿನಾಂಕದಿಂದ ವಾದಿಯರಿಗೆ ಸ್ವಾಧೀನವನ್ನು ಕೊಡಿಸುವ ದಿನಾಂಕದವರೆಗೆ ದಾವಾ ಷೆಡ್ಯೂಲ್ ಸ್ವತ್ತಿನಲ್ಲಿ ಬರತಕ್ಕ ಉತ್ಪತ್ತಿಯ ಲೆಕ್ಕಪತ್ರ ನೀಡುವಂತೆ ಮತ್ತು ಇನ್ನಿತರ ಪರಿಹಾರಗಳನ್ನು ಕೋರಿ ಡಿಕ್ರಿ ಮಾಡಬೇಕಾಗಿ ಕೋರಿಕೊಂಡಿರುತ್ತಾರೆ.

## 2. ದಾವೆಯ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತೆ ಇರುತ್ತದೆ.

ವಾದಿಯರ ಮತ್ತು ಪ್ರತಿವಾದಿಯರ ಕುಟುಂಬದ ಮೂಲ ಪುರುಷ ಮರಿಲಿಂಗಯ್ಯ ಮತ್ತು ಮರಿದೇವಮ್ಮ ದಂಪತಿಗಳಿಗೆ ಆರು ಜನ ಮಕ್ಕಳು ಇದ್ದು, ವಾದಿಯರು ಮತ್ತು ಪ್ರತಿವಾದಿಯರು ಆಗಿರುತ್ತಾರೆ. ವಾದಿಯರು ಅಕ್ಕತಂಗಿಯರಾಗಿದ್ದು, ವಾದಿಯರಿಗೆ ಪ್ರತಿವಾದಿಯರು ಸಹೋದರ ಸಹೋದರಿಯರಾಗಿರುತ್ತಾರೆ. ದಾವಾ ಆಸ್ತಿಗಳು ವಾದಿಯರ ಮತ್ತು 1 ರಿಂದ 4 ನೇ ಪ್ರತಿವಾದಿಯರ ಒಟ್ಟು ಕುಟುಂಬದ ಪಿತ್ರಾರ್ಜಿತ ಆಸ್ತಿಗಳಾಗಿರುತ್ತವೆ. ಸದರಿ ಆಸ್ತಿಯಲ್ಲಿ ವಾದಿಯರ ಮತ್ತು ಪ್ರತಿವಾದಿಯರು ಜಂಟಿ ಸ್ವಾಧೀನದಲ್ಲಿದ್ದುಕೊಂಡು ವ್ಯವಸಾಯ ಮಾಡಿಕೊಂಡು ಬರುತ್ತಿರುತ್ತಾರೆ. ದಾವಾ ಆಸ್ತಿಯ ಖಾತೆಯು ವಾದಿಯರ ತಾಯಿ ಮರಿದೇವಮ್ಮ ರವರ ಹೆಸರಿನಲ್ಲಿ ಮುಂದುವರೆಯುತ್ತಿರುತ್ತವೆ. ವಾದಿಯರು ಮತ್ತು ಪ್ರತಿವಾದಿಯರ ತಂದೆ ತಾಯಿಯಾದ ಮರಿಲಿಂಗಯ್ಯ ಮತ್ತು ಮರಿದೇವಮ್ಮರವರು ಮರಣ ಹೊಂದಿರುತ್ತಾರೆ.

ದಾವಾ ಆಸ್ತಿ ಹೆಚ್ಚು ಬೆಲೆ ಬಾಳುವಂತಹ ಮತ್ತು ಹೆಚ್ಚು ಆದಾಯ ಬರುವಂತಹ ಆಸ್ತಿಯಾಗಿರುತ್ತದೆ. ಹೀಗಿರುವಲ್ಲಿ ಪ್ರತಿವಾದಿಗಳು ವಾದಿಗೆ ದಾವಾ ಆಸ್ತಿಯಿಂದ ಬರುವ ಯಾವುದೇ ಆದಾಯವನ್ನು ಕೊಡುತ್ತಿರುವುದಿಲ್ಲ. ಮತ್ತು ದಾವಾ ಆಸ್ತಿಗಳ ಆದಾಯದ ಉತ್ಪತ್ತಿ ಲೆಕ್ಕವನ್ನು ನೀಡುತ್ತಿರುವುದಿಲ್ಲ. ದಾವಾ ಆಸ್ತಿಗಳಲ್ಲಿ ವಾದಿಯರಿಗೂ ಸಹ ಭಾಗಾಂಶದ ಹಕ್ಕು ಇರುತ್ತದೆ. ಆ ಕಾರಣದಿಂದ ವಾದಿಯರು ಹೀಗ್ಗೆ ಒಂದು ತಿಂಗಳ ಹಿಂದೆ ಪ್ರತಿವಾದಿಯರನ್ನು ಭೇಟಿ ಮಾಡಿ ದಾವಾ ಆಸ್ತಿಗಳಲ್ಲಿ ಹಿಸ್ಸೆಯನ್ನು ಕೇಳಿದಾಗ ಅವರು ತಿರಸ್ಕರಿಸಿರುತ್ತಾರೆ. ವಾದಿಯರು ಮತ್ತು ಪ್ರತಿವಾದಿಯರ ನಡುವೆ ದಾವಾ ಆಸ್ತಿ ಭಾಗವಾಗಿರುವುದಿಲ್ಲ. ವಾದಿಯರು ತಮಗೆ ಬರಬೇಕಾದ ಭಾಗದ ಬಗ್ಗೆ ಕುಟುಂಬದ ಹಿತೈಷಿಗಳ ಮತ್ತು ಗ್ರಾಮದ ಹಿರಿಯ ಮುಖಂಡರ

ಮೂಲಕ ವಾದಿಯರಿಗೆ ಬರಬೇಕಾದ ಕಾನೂನುಬದ್ಧ ಹಿಸ್ಸೆಯನ್ನು ನೀಡುವಂತೆ ಪ್ರತಿವಾದಿಗಳನ್ನು ಕೇಳಲಾಗಿ ಅವರು ತಿರಸ್ಕರಿಸಿರುತ್ತಾರೆ. ಆದ್ದರಿಂದ ವಾದಿಯರಿಗೆ ಅನ್ಯ ಮಾರ್ಗವಿಲ್ಲದೆ ದಾವಾ ಆಸ್ತಿಗಳಲ್ಲಿ ಆರನೇ ಎರಡು (2/6) ಒಂದು ಭಾಗಾಂಶವನ್ನು ಕೋರಿ ವಾದಿಗಳು ಈ ದಾವೆಯನ್ನು ಸಲ್ಲಿಸಿರುತ್ತಾರೆ.

**3.** ಪ್ರತಿವಾದಿಗಳಿಗೆ ನ್ಯಾಯಾಲಯದ ಮುಖಾಂತರ ದಾವಾ ಸಮನ್ಸ್ ಜಾರಿಯಾಗಿದ್ದು, 1, 3 ಮತ್ತು 4 ನೇ ಪ್ರತಿವಾದಿಗಳು ಹಾಜರಾಗದೇ ಇದ್ದ ಕಾರಣ, ಅವರನ್ನು ಏಕಪಕ್ಷೀಯವೆಂದು ಪರಿಗಣಿಸಿದ್ದು, ಹಾಗೂ 2 ನೇ ಪ್ರತಿವಾದಿಯವರು ವಕೀಲರ ಮೂಲಕ ಹಾಜರಾಗಿದ್ದು, ಲಿಖಿತ ತಕರಾರನ್ನು ಸಲ್ಲಿಸಿರುವುದಿಲ್ಲ.

**4.** ವಾದ ಪತ್ರವನ್ನು ಪರಿಶೀಲಿಸಿದ ನಂತರ, ಈ ಅಂಶಗಳನ್ನು ರಚಿಸಲಾಗಿದೆಃ

## ಅಂಶ

**1.** ವಾದಿಗಳು ದಾವೆಯಲ್ಲಿ ಕೇಳಿರುವ ಪರಿಹಾರವನ್ನು ಪಡೆಯಲು ಅರ್ಹರೇ ?

**2.** ಯಾವ ಆದೇಶ ?

**5.** ವಾದಿಗಳು ತಮ್ಮ ದಾವೆಯಲ್ಲಿ ಕೋರಿಕೊಂಡಿರುವ ಪರಿಹಾರವನ್ನು ರುಜುವಾತುಪಡಿಸಲು, 1 ನೇ ವಾದಿಯು ಪ್ರಾಸಾ-1 ಎಂದು ವಿಚಾರಣೆಗೆ ಒಳಪಟ್ಟಿದ್ದು, ನಿಪಿ-1 ರಿಂದ 5 ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ಪ್ರತಿವಾದಿಗಳ ಪರವಾಗಿ ಯಾರೂ ಲಿಖಿತ ತಕರಾರನ್ನು ಸಲ್ಲಿಸಿಲ್ಲ, ವಿಚಾರಣೆಗೆ ಒಳಪಟ್ಟಿಲ್ಲ ಮತ್ತು ದಾಖಲೆಗಳನ್ನು ಗುರುತಿಸಿಕೊಂಡಿಲ್ಲ. ಆ ಕಾರಣ 2 ನೇ ಪ್ರತಿವಾದಿ ಪರ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

**6.** ವಾದಿಗಳ ಪರ ಮಾನ್ಯ ವಕೀಲರ ವಾದವನ್ನು ಆಲಿಸಲಾಯಿತು.

**7.** ವಾದಿಗಳು ಹಾಜರುಪಡಿಸಿದ ದಾಖಲಾತಿಗಳನ್ನು ಪರಿಶೀಲಿಸಿ, ಈ ಮೇಲಿನ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸಿರುತ್ತೇನೆ.

ಅಂಶ - 1 : ಸಕಾರಾತ್ಮಕವಾಗಿ
ಅಂಶ - 2 : ಅಂತಿಮ ಆದೇಶದಂತೆ,
ಈ ಕೆಳಕಂಡ

## ಕಾರಣಗಳು

**8. ಅಂಶ-1:-** 1 ನೇ ವಾದಿಯು ತನ್ನ ದಾವಾದ ಸಮರ್ಥನೆಗಾಗಿ ತಾನೇ ಸ್ವತಃ ಪ್ರಾಸಾ-1 ಎಂದು ವಿಚಾರಣೆಗೆ ಒಳಪಟ್ಟಿದ್ದು, ತನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಕುಟುಂಬದ ಮೂಲ ಪುರುಷನಾದ ಮರಿಲಿಂಗಯ್ಯ ಮತ್ತು ಮರಿದೇವಮ್ಮ ದಂಪತಿಗಳಿಗೆ 6 ಜನ ಮಕ್ಕಳಿದ್ದು, ನಿಪಿ-1 ವಂಶವೃಕ್ಷದಂತೆ 1 ಮತ್ತು 2 ನೇ ವಾದಿಗಳು ಹಾಗೂ 4 ನೇ ಪ್ರತಿವಾದಿಯು ಹೆಣ್ಣು ಮಕ್ಕಳಾಗಿದ್ದು, ಪ್ರತಿವಾದಿ 1 ರಿಂದ 3 ರವರು ಅವರ ಸಹೋದರರಾಗಿರುತ್ತಾರೆ.

ಪ್ರಾಸಾ-1 ರವರು ತಮ್ಮ ಪರವಾಗಿ ನಿಪಿ-1 ರಿಂದ 5 ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ.

ನಿಪಿ-1 ನೋಟರಿ ವಂಶವೃಕ್ಷ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು, ಅದು ಪಕ್ಷಗಾರರ ನಡುವಿನ ಒಟ್ಟು ಕುಟುಂಬದ ಸದಸ್ಯರ ಅಂಶವನ್ನು ತಿಳಿಯಪಡಿಸುತ್ತದೆ.

ನಿಪಿ-2 ಪಹಣಿ ಪತ್ರಿಕೆಯಾಗಿದ್ದು, ಅದು ಮರಿದೇವಮ್ಮ ಕೋಂಃ ನಿಂಗಪ್ಪ ರವರ ಹೆಸರಿನಲ್ಲಿ ಇರುತ್ತದೆ.

ನಿಪಿ-3 ರಿಂದ 5 ಪಹಣಿ ಪತ್ರಿಕೆಯಾಗಿದ್ದು, ಅದು ಮರಲಿಂಗಯ್ಯ ಬಿನ್ ಲಿಂಗಯ್ಯ ರವರ ಹೆಸರಿನಲ್ಲಿರುತ್ತದೆ. ನಿಪಿ-1 ವಂಶವೃಕ್ಷವನ್ನು ನಿರಾಕರಿಸುವಂತಹ ತಕರಾರು ಪತ್ರವನ್ನು ಯಾವುದೇ ಪ್ರತಿವಾದಿಗಳು ಸಲ್ಲಿಸಿಕೊಂಡಿರುವುದಿಲ್ಲ. ವಾದಿಯು ವಂಶವೃಕ್ಷ ನಿಪಿ-1 ನ್ನು ಹಾಜರುಪಡಿಸಿದ್ದು, ಅದು ಪಕ್ಷಗಾರರ ನಡುವಿನ ಒಟ್ಟು ಕುಟುಂಬದ ಸದಸ್ಯರ ಅಂಶವನ್ನು ತಿಳಿಯಪಡಿಸುತ್ತದೆ. ಮೂಲಪುರುಷನಾದ ಮರಿಲಿಂಗಯ್ಯ ರವರು ಆ ಕುಟುಂಬದ ಮುಖ್ಯಸ್ತರೆಂಬುದು ತಿಳಿದುಬರುತ್ತದೆ. ಸದರಿ ವಂಶವೃಕ್ಷವೂ ಕುಟುಂಬದ ಸದಸ್ಯತ್ವವನ್ನು ವಾದಪತ್ರದಲ್ಲಿ ತಿಳಿಸಿರುವಂತೆ ಗೋಚರಪಡಿಸುತ್ತದೆ.

**9.** ಕುಟುಂಬದ ಯಜಮಾನನಾದ ಮರಿಲಿಂಗಯ್ಯ ನವರ ಹೆಸರಿನಲ್ಲಿ ದಾವಾ ಸರ್ವೆ ನಂ.79/9 1 ಏಕರೆ 38 ಗುಂಟೆ, ಸರ್ವೆ ನಂ.2/6, 24 ಗುಂಟೆ, ಸರ್ವೆ ನಂ.32/2 ರ 13 ಗುಂಟೆ ಸ್ವತ್ತು ಇರುವುದು ನಿಪಿ-3 ರಿಂದ 5 ರ ಪಹಣಿಗಳಲ್ಲಿ ಕಂಡು ಬರುತ್ತದೆ.

**10.** ಕುಟುಂಬದ ಯಜಮಾನನಾದ ಮರಿಲಿಂಗಯ್ಯ ಮತ್ತು ಮರಿದೇವಮ್ಮ ನವರ ಆರು ಜನ ಮಕ್ಕಳು ದಾವಾ ಆಸ್ತಿಗಳಲ್ಲಿ ಜಂಟೀ ಸ್ವಾಧೀನದಲ್ಲಿಟ್ಟುಕೊಂಡಿದ್ದು, ವ್ಯವಸಾಯ

ಮಾಡಿಕೊಂಡು ಬರುತ್ತಿದ್ದು, ಅವರು ಮರಣ ಹೊಂದಿದ ನಂತರ ದಾವಾ ಸ್ವತ್ತುಗಳು ಮರಿಲಿಂಗಯ್ಯ ಮತ್ತು ಮರಿದೇವಮ್ಮ ನವರ ಹೆಸರಿನಲ್ಲಿ ಮುಂದುವರೆದಿರುತ್ತದೆ.

**11.** ನಿಪಿ-2 ಪಹಣಿಯು ಮರಿದೇವಮ್ಮನವರ ಹೆಸರಿನಲ್ಲಿ ಸರ್ವೆ ನಂ. 45/1 ಕ್ಕೆ ಸಂಬಂಧಿಸಿದಂತೆ ಕಂಡು ಬರುತ್ತದೆ. ಕುಟುಂಬದ ಸ್ವತ್ತುಗಳಲ್ಲಿ ಯಾವುದೇ ವಿಭಾಗವಾಗಿಲ್ಲವೆಂಬುದು ಕಂಡು ಬರುತ್ತದೆ. ಪ್ರಸ್ತುತ ವಾದಿಗಳು ಮತ್ತು ಪ್ರತಿವಾದಿಗಳು ದಾವಾ ಷೆಡ್ಯೂಲ್ ಸ್ವತ್ತುಗಳ ಜಂಟಿ ಸ್ವಾಧೀನದಲ್ಲಿರುತ್ತಾರೆ. ಮೃತ ಮರಿಲಿಂಗಯ್ಯ ಮತ್ತು ಮರಿದೇವಮ್ಮ ರವರ ಮರಣದ ನಂತರ ಅವರ ಮಕ್ಕಳು ಅವರ ವಾರಸುದಾರರಾಗಿ, ಸ್ವತ್ತುಗಳನ್ನು ಸಮನಾಗಿ ಹಿಸ್ಸೆಹೊಂದಲು ಅರ್ಹರಿರುತ್ತಾರೆ.

**12.** ಮೇಲಿನ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿದಾಗ, ದಾವಾ ಸ್ವತ್ತುಗಳು ವಾದಿ ಮತ್ತು ಪ್ರತಿವಾದಿಯರ ಪಿತ್ರಾರ್ಜಿತ ಮತ್ತು ಜಂಟಿ ಸ್ವತ್ತುಗಳು ಎಂಬುದರ ಬಗ್ಗೆ ಕಂದಾಯ ದಾಖಲೆಗಳು ಪುಷ್ಠೀಕರಿಸುತ್ತದೆ. ಪ್ರತಿವಾದಿಗಳು ನ್ಯಾಯಾಲಯಕ್ಕೆ ಹಾಜರಾಗಿ ಲಿಖಿತ ತಕರಾರನ್ನು ಸಲ್ಲಿಸಿಕೊಂಡಿರುವುದಿಲ್ಲ. ಆದ್ದರಿಂದ ವಾದಿಯರ ಮೌಖಿಕ ಸಾಕ್ಷ್ಯ ಮತ್ತು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲೆಗಳನ್ನು ನಂಬದೇ ಇರಲು ಯಾವುದೇ ಸಕಾರಣ ಇರುವುದಿಲ್ಲ. ಮೇಲಿನ ಎಲ್ಲಾ ಚರ್ಚಿತ ಸಂಗತಿಗಳಿಂದ ವಾದಿಗಳು ಮತ್ತು ಪ್ರತಿವಾದಿ 1 ರಿಂದ 4 ರವರು ಮೂಲಪುರುಷನಾದ ಮರಿಲಿಂಗಯ್ಯ ರವರ ವಾರಸುದಾರರಾಗಿದ್ದು, ಮತ್ತು ದಾವಾ ಸ್ವತ್ತು ಪಿತ್ರಾರ್ಜಿತ ಸ್ವತ್ತಾಗಿದ್ದು, ವಾದಿಗಳು ಮತ್ತು ಪ್ರತಿವಾದಿಗಳು ಸದರಿ ಸ್ವತ್ತಿನಲ್ಲಿ ತಲಾ 1/6 ಭಾಗಾಂಶದ ಹಕ್ಕನ್ನು ಹೊಂದಿರುತ್ತಾರೆ. ಈ ಕಾರಣದಿಂದ ಅಂಶ-1 ನ್ನು ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.

**13.** **ಅಂಶ-2ಃ** ಈ ಮೇಲ್ಕಂಡ ಅಂಶಕ್ಕೆ ನೀಡಿರುವ ಕಾರಣಗಳಿಗಾಗಿ ಅಂತಿಮವಾಗಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

# ಆದೇಶ

ವಾದಿಗಳ ಈ ದಾವೆಯನ್ನು ಪುರಸ್ಕರಿಸಲಾಗಿದೆ.

ವಾದಿಗಳು ಮತ್ತು ಪ್ರತಿವಾದಿಗಳು ದಾವಾ ಸ್ವತ್ತಿನಲ್ಲಿ ತಲಾ **1/6** ರಷ್ಟು ಭಾಗಾಂಶದ ಹಕ್ಕನ್ನು ಪಡೆಯಲು ಅರ್ಹರಿರುತ್ತಾರೆ.

ಎರಡೂ ಪಕ್ಷಗಾರರ ಸಂಬಂಧವನ್ನು ಪರಿಗಣಿಸಿ ಖರ್ಚಿನ ಬಗ್ಗೆ ಯಾವುದೇ ಆದೇಶ ಮಾಡಿರುವುದಿಲ್ಲ.

ತೀರ್ಪಿನಂತೆ ಪ್ರಾಥಮಿಕ ಡಿಕ್ರಿ ಬರೆಯಲು ಆದೇಶಿಸಲಾಗಿದೆ.

ಕಛೇರಿಯು ತೀರ್ಪಿನ ಪ್ರಾಥಮಿಕ ಡಿಕ್ರಿ ಆದ ನಂತರ ವಾದಿಗಳ ಮತ್ತು ಪ್ರತಿವಾದಿಗಳ ಹಿಸ್ಸೆಯ ಭಾಗಗಳನ್ನು ಕಾನೂನಿನಡಿ ಅಂತಿಮ ಡಿಕ್ರಿ ಬರೆಯಲು ಮುಂದಿನ ಕ್ರಮಕ್ಕಾಗಿ ಸಂಬಂಧಪಟ್ಟ ಪಕ್ಷಗಾರರು ಹಾಜರಾಗಿ ಕ್ರಮ ಜರುಗಿಸಲು ಆದೇಶಿಸಲಾಗಿದೆ.

(ಶೀಘ್ರಲಿಪಿಗಾರರಿಗೆ ಉಕ್ತಲೇಖನ ನೀಡಿದ್ದು, ಸದರಿಯವರು ಬೆರಳಚ್ಚು ಮಾಡಿದ ನಂತರ ಓದಿ ಪರಿಶೀಲಿಸಿ, ಪರಿಷ್ಕರಿಸಿ ತೆರೆದ ನ್ಯಾಯಾಲಯದಲ್ಲಿ ಇಂದು ದಿನಾಂಕ **8** ನೇ ಫೆಬ್ರವರಿ **2024** ರಂದು ಸದರಿ ತೀರ್ಪನ್ನು ಘೋಷಿಸಲಾಗಿದೆ.)

(ಪಾರ್ವತಮ್ಮ.ಬಿ.)
ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ,
ಪಾಂಡವಪುರ.

# ಅನುಬಂಧ

**ವಾದಿಯ ಪರವಾಗಿ ವಿಚಾರಿಸಲಾದ ಸಾಕ್ಷಿದಾರರ ಪಟ್ಟಿಃ**

ಪಿ.ಡಬ್ಲ್ಯೂ - 1 : ಮಹದೇವಮ್ಮ

**ವಾದಿಯ ಪರವಾಗಿ ಗುರುತಿಸಲಾದ ದಾಖಲೆಗಳ ಪಟ್ಟಿಃ**

ನಿಪಿ-1 : ನೋಟರಿ ವಂಶವೃಕ್ಷ

ನಿಪಿ-2 ರಿಂದ 5 : ಪಹಣಿ ಪತ್ರಿಕೆಗಳು

**ಪ್ರತಿವಾದಿಯ ಪರವಾಗಿ ವಿಚಾರಿಸಲಾದ ಸಾಕ್ಷಿದಾರರ ಪಟ್ಟಿಃ**

ಇಲ್ಲ

**ಪ್ರತಿವಾದಿಯ ಪರವಾಗಿ ಗುರುತಿಸಲಾದ ದಾಖಲೆಗಳ ಪಟ್ಟಿಃ**

ಇಲ್ಲ

**(ಪಾರ್ವತಮ್ಮ.ಬಿ.)**
**ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ,**
**ಪಾಂಡವಪುರ.**